# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** M/s Kanigiri Renewable Private Limited, ರವರಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 37.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ರವರಿಗೆ ವರ್ಗಾಯಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಇಎನ್ 72 ಎನ್‌ಸಿಇ 2019, ದಿನಾಂಕ:13.02.2019
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರ ಪತ್ರ ಸಂಖ್ಯೆ:KRED/08/OKPPL-37.8 MW (KRPL)/2021/1336, ದಿನಾಂಕ: 26.03.2021

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದನ್ವಯ M/s Kanigiri Renewable Private Limited, ರವರಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಅನಬೂರು, ಚಿಕ್ಕಕುಮಟಾಲಾಕುಂಟೆ ಮತ್ತು ಹಿರೇಕುಮಟಾಲಾಕುಂಟೆ ಗ್ರಾಮಗಳಲ್ಲಿ ಹಂಚಿಕೆಯಾಗಿದ್ದ 10 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ವಂತ ಬಳಕೆ/ ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ 37.8 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮೇಲಿನ ಆದೇಶದನ್ವಯ M/s Kanigiri Renewable Private Limited, ಕಂಪನಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 37.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ಕಂಪನಿಯವರಿಗೆ ವರ್ಗಾವಣೆ ಮಾಡುವಂತೆ M/s Ostro Kannada Power Private Limited ಇವರು ಕೆ.ಆರ್.ಇ.ಡಿ.ಎಲ್.ನ್ನು ಕೋರಿರುವುದಾಗಿ ಸದರಿ ವರ್ಗಾವಣೆಗೆ ಎರಡು ಕಂಪನಿಯವರು ಸಹಮತಿ ನೀಡಿರುವುದಾಗಿ ಹಾಗೂ ಸದರಿ ವರ್ಗಾವಣೆಗೆ ಅನ್ವಯವಾಗುವ ವರ್ಗಾವಣೆ ಶುಲ್ಕವನ್ನು ಕೆಆರ್‌ಇಡಿಎಲ್‌ಗೆ ಪಾವತಿಸಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು, ಸದರಿಯವರು ಯೋಜನೆಯನ್ನು ಅನುಷ್ಠಾನಗೊಳಿಸಲು ಅಕ್ಷಾಂಶ ಮತ್ತು ರೇಖಾಂಶ ಸ್ಥಳದಲ್ಲಿ 18 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು (2100 ಕಿ.ವ್ಯಾ. ಸಾಮರ್ಥ್ಯದ ಟರ್ಬೈನ್‌ಗಳು) ಅಳವಡಿಸಲು ಪ್ರತಿ ಟರ್ಬೈನ್‌ನ footprint ಜಾಗಕ್ಕೆ 4 ಎಕರೆಯಂತೆ ಒಟ್ಟು 72 ಎಕರೆ ಜಮೀನನ್ನು ಉಪಯೋಗಿಸಿಕೊಳ್ಳುವುದಾಗಿ ತಿಳಿಸುತ್ತಾ, ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತಿಗೆ ಸಂಬಂಧಿಸಿದಂತೆ ಮೂಲ ಆದೇಶದಲ್ಲಿ ನಮೂದಿಸಿರುವ ಸ್ವಂತ ಬಳಕೆ / ಮೂರನೇ ವ್ಯಕ್ತಿಗೆ ರಾಜ್ಯ ವಿದ್ಯುತ್ ಪ್ರಸರಣ ಜಾಲದ ಮುಖಾಂತರ ಮಾರಾಟ ಮಾಡುವ ಬದಲಾಗಿ, ಕೇಂದ್ರ ಸರ್ಕಾರದ Power Grid Corporation Of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ವರ್ಗದ ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಹಾಗೂ M/s Kanigiri Renewable Private Limited, ಕಂಪನಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 37.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ಕಂಪನಿಯವರಿಗೆ ವರ್ಗಾವಣೆ ಮಾಡುವ ಕುರಿತು ಯೋಜನೆಯ ಚೆಕ್‌ಲಿಸ್ಟ್‌ನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ :ಎನರ್ಜಿ 108 ಎನ್ ಸಿಇ 2021
## ಬೆಂಗಳೂರು ದಿನಾಂಕ:09.04.2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Kanigiri Renewable Private Limited, ಕಂಪನಿಯವರಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಅನಬೂರು,

...2

ಚಿಕ್ಕಕುಮಟಾಲಾಕುಂಟಿ ಮತ್ತು ಹಿರೇಕುಮಟಾಲಾಕುಂಟೆ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 37.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ಕಂಪನಿಯವರಿಗೆ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ವರ್ಗಾಯಿಸಿ ಆದೇಶಿಸಿದೆ.

**Geographical area description for 37.8 MW Capacity Wind Power Project of M/s Ostro Kannada Power Private Limited**

| Transfer capacity in MW | villages /Taluk /District | Geographical area description of the project |
|---|---|---|
| 37.8 (18 Nos x 2100 | Anaburu, ChikkaKumatalakunta, Hirekumhalkunta Villages, Jagaluru Taluk, Davangere District | The Proposed area is covered Anaburu. The area surrounded by points (A-B-C-D-E-F-G-A) and held in the following Geographical co-ordinates as:<br><br>**Point A:** Lat: 14°34'39.18" N Long:76°24'23.97"E<br>**Point B:** Lat: 14°34'53.61" N Long:76°24'14.83"E<br>**Point C:** Lat: 14°35'5.46" N Long:76°23'48.12"E<br>**Point D:** Lat: 14°36'31.89" N Long:76°23'27.85"E<br>**Point E:** Lat: 14°38'16.51"N Long:76°24'53.35"E<br>**Point F:** Lat: 14°37'14.70" N Long:76°26'29.36"E<br>**Point G:** Lat: 14°34'35.76"N Long:76°25'36.91"E<br><br>Peaks: 694, 668, 657, 656 & 680 m AMSL |
| 37.8 MW | | |

**ಷರತ್ತುಗಳು**

1 M/s Ostro Kannada Power Private Limited ಕಂಪನಿಯು ಸರ್ಕಾರಿ ಆದೇಶ ಸಂಖ್ಯೆ:ಇಎನ್ 435 ಎನ್.ಸಿ.ಇ 2011, ದಿನಾಂಕ:06.01.2012ರನ್ವಯ 45 ದಿನಗಳ ಒಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಪೂರಕ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

2 M/s Ostro Kannada Power Private Limited ಕಂಪನಿಯು ಯೋಜನೆಯ ವರ್ಗಾವಣೆಗೆ ಸಂಬಂಧಿಸಿದಂತೆ ನಿಯಮಾನುಸಾರ ನಿಗದಿಪಡಿಸಿರುವ ವರ್ಗಾವಣೆ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು.

3 M/s Ostro Kannada Power Private Limited ರವರು ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಕೇಂದ್ರ ಸರ್ಕಾರದ Power Grid Corporation Of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಲು ಅನುಮೋದನೆ ಪಡೆದು, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ವರ್ಗದ ಮುಖಾಂತರ ಮಾತ್ರ ವಿದ್ಯುತ್ ಸರಬರಾಜು ಮಾಡುವ ಷರತ್ತಿನೊಂದಿಗೆ ಸಹಮತಿಸಿದೆ.

4 ಈ ಆದೇಶವನ್ನು ರದ್ದುಪಡಿಸುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

...3